**ಓ ಎಸ್ ನಂಃ 336-19**
**ಪಿ ಡಬ್ಲ್ಯೂ ಃ 1**

**ದಿಃ 12-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಆರ್ ಎಸ್ ವಕೀಲರಿಂದ**

**18.** ನಾನು ಇಡಗೂರು, ಸಿ ಎಸ್ ಪುರ ಹೋಬಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆಯಲ್ಲಿ ನನ್ನ ಹುಟ್ಟಿನಿಂದ ವಾಸವಾಗಿರುತ್ತೇನೆ. ನನ್ನ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಮತ್ತು ಇತ್ಯಾದಿಗಳು ಅಲ್ಲಿನ ವಿಳಾಸವು ತೋರಿಸುತ್ತದೆ ಎಂದರೆ ಸರಿ.

**19.** ವಾದಿ 1 ರಿಂದ 3 ರವರು ಮಾಗಡಿಯಲ್ಲಿ ವಾಸವಾಗಿರುತ್ತಾರೆ. ಸದರಿಯವರ ವಿಳಾಸದ ಗುರುತಿನ ಚೀಟಿಗಳು ಮಾಗಡಿಯಲ್ಲಿರುತ್ತವೆ ಎಂದರೆ ಸರಿ. ವಾದಿಗಳು ಅವರ ಹುಟ್ಟಿನಿಂದ ಮಾಗಡಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 1 ನೇ ವಾದಿ ರಿಯಾಸ್ ಉಲ್ಲಾರವರಿಗೆ ಒಂದು ಹೆಣ್ಣು ಮಗು ಮತ್ತು ಒಂದು ಗಂಡು ಮಗು ಇರುತ್ತದೆ ಎಂದರೆ ಸರಿ. ಎಲ್ಲಾ ಮಕ್ಕಳಿಗೂ ವಿವಾಹವಾಗಿರುತ್ತದೆ ಎಂದರೆ ಸರಿ. ಅವರ ಗಂಡು ಮಗ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ.

**20.** 2 ನೇ ವಾದಿಗೆ ಒಂದು ಗಂಡು ಮಗು ಇದ್ದು, ಅವನು ಮದುವೆಯಾಗಿರುವುದಿಲ್ಲ. 3 ನೇ ವಾದಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಗು ಇರುತ್ತದೆ.

**21.** ನಾನು ವಾಸವಾಗಿರುವ ಜಾಗಕ್ಕೂ ಮತ್ತು ದಾವಾ ಸ್ವತ್ತಿಗೂ 50 ಕಿ ಮೀ ಅಂತರವಿರುತ್ತದೆ ಎಂದರೆ ಸರಿ. 2 ನೇ ವಾದಿ ನನಗೆ ಸಾಕ್ಷಿ ಹೇಳಲು ಯಾವುದೇ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ. ವಾದಿಗಳ ಪರಿಚಯು ನನಗೆ 50 ವರ್ಷಗಳಿಂದ ಇರುತ್ತದೆ. ವಾದಿಗಳು ವಾಸಮಾಡುವ ಜಾಗಕ್ಕೆ ಮತ್ತು ನ್ಯಾಯಾಲಯಕ್ಕೆ 1 ಕಿ ಮೀ ದೂರವಿರುತ್ತದೆ ಎಂದರೆ ಸರಿ.

**22.** ವಾದಿಗಳು ನನಗಿಂತ ಎಲ್ಲರೂ ಚಿಕ್ಕವರು ಎಂದರೆ ಸರಿ. 1 ನೇ ವಾದಿ 12 ವರ್ಷ, 2 ನೇ ವಾದಿ 16 ವರ್ಷ ಮತ್ತು 3 ನೇ ವಾದಿ 25 ವರ್ಷ ನನಗಿಂತ ಚಿಕ್ಕವರು ಎಂದರೆ ಸರಿ.

**23.** ನಾನು ಇದೇ ಮೊದಲನೇ ಬಾರಿಗೆ ಸಾಕ್ಷಿ ಹೇಳುತ್ತಿದ್ದೇನೆ 1 ನೇ ವಾದಿಗೆ ಪಾರ್ಶವಾಯು ಆಗಿದ್ದು 3 ನೇವಾದಿಗೆ ಅಪಘಾತದಲ್ಲಿ ಬೆನ್ನು ಗಾಯವಾಗಿದ್ದು ನನ್ನನ್ನು ಸಾಕ್ಷಿ ಹೇಳಲು ಹೇಳಿರುತ್ತಾರೆ. 2 ನೇ ವಾದಿ ಚೆನ್ನಾಗಿರುತ್ತಾರೆ. ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಅಧಿಕಾರಪತ್ರದಲ್ಲಿ ಮೇಲೆ ಹೇಳಿರುವ ವಿಷಯವನ್ನು ಹೇಳಿರುತ್ತೇನೆ. ನಾನು ನ್ಯಾಯಾಲಯಕ್ಕೆ 1 ನೇ ವಾದಿ ಮತ್ತು 3 ನೇ ವಾದಿ ತೊಂದರೆಯಾಗಿರುವ ಬಗ್ಗೆ ದಾಖಲಾತಿಗಳನ್ನು ನೀಡಿರುತ್ತೇನೆ. 1 ನೇ ಮತ್ತು 3 ನೇ ವಾದಿಗೆ ಯಾವುದೇ ಕಾಯಿಲೆ ಇರುವುದಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

24. ಸದರಿ ಪ್ರಕರಣವನ್ನು ದಾಖಲು ಮಾಡಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಾನು ಸದರಿ ದಾವೆಯನ್ನು ಹೊಸಹಳ್ಳಿ ಗ್ರಾಮದ ಸರ್ವೆನಂ 28 ರಲ್ಲಿ 2 ಎಕರೆ 15 ಗುಂಟೆಗೆ ಹೂಡಿರುತ್ತೇನೆ. ಸರ್ವೆ ನಂ 28 ರಲ್ಲಿ ಒಟ್ಟು ವಿಸ್ತೀರ್ಣ 3 ಎಕರೆ 22 ಗುಂಟೆ ಇದ್ದು ಅದರಲ್ಲಿ ಖರಾಬು 4 ಗುಂಟೆ ಇರುತ್ತದೆ. ವಾದಿಗಳ ತಂದೆ 2007 ರಲ್ಲಿ ತೀರಿಕೊಂಡಿರುತ್ತಾರೆ. ವಾದಿಗಳ ತಂದೆ ತೀರಿಕೊಂಡಾಗ ಅವರ ಹೆಸರಿನಲ್ಲಿ ಕಂದಾಯ ದಾಖಲಾತಿಗಳು ಇತ್ತು. ನಾನು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಎಷ್ಟು ವರ್ಷಗಳ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯು ತುಂಬಾ ಹಳೆಯ ಕಾಲದಿಂದ ಅವರ ಹೆಸರಿಗೆ ದಾಖಲಾತಿಗಳು ಇತ್ತು ಎಂದು ನುಡಿಯುತ್ತಾರೆ. ಆಲಿಜಾನ್ ರವರ ಹೆಸರಿನಲ್ಲಿ ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಮೊದಲಿಗೆ 1 ಎಕರೆ 29 ಗುಂಟೆ ಇತ್ತು ನಂತರ ಸಾಕ್ಷಿಯು ಮುಂದುವರೆದು 2 ಎಕರೆ 15 ಗುಂಟೆ ಜಮೀನಿನಲ್ಲಿ ಅವರು ಅನುಭವದಲ್ಲಿದ್ದರು ಎಂದು ನುಡಿಯುತ್ತಾರೆ. 2 ಎಕರೆ 15 ಗುಂಟೆ ಜಮೀನು ಆಲಿಜಾನ್ ಅನುಭವದಲ್ಲಿರುವುದನ್ನು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ನೀಡಿರುತ್ತೇನೆ. ನಾನು ಆಲಿಜಾನ್ ರವರು 1 ಎಕರೆ 29 ಗುಂಟೆ ಜಮೀನಿನಲ್ಲಿ ದಾಖಲಾತಿ ಇರುವ ಬಗ್ಗೆ ಮತ್ತು 2 ಎಕರೆ 15 ಗುಂಟೆ ಅನುಭವ ಇರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು, ನಾನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

25. ನಾನು ಆಲಿಜಾನ್ ರವರಿಗೆ ಅನುಭವ ಮತ್ತು ದಾಖಲಾತಿಯ ನಮೂದಿನ ಬಗ್ಗೆ ತೋರಿಸಲು ನಿಪಿ 2 ರಿಂದ 7 ಪಹಣಿ, ಕ್ರಯಪತ್ರ, ರಿಲೀಸ್ ಡೀಡ್(ನಿಪಿ 11 ರಿಂದ 13) ನ್ಯಾಯಾಲಯಕ್ಕೆ ನೀಡಿರುತ್ತೇನೆ ಜೊತೆಗೆ ಫೋಟೋಗಳನ್ನು ಕೂಡ ಕೊಟ್ಟಿರುತ್ತೇನೆ. ಸದರಿ ದಾಖಲಾತಿಗಳು ನಾನು ಹೇಳಿದ ಸ್ವಾಧೀನವನ್ನು ದೃಢೀಕರಿಸುವುದಿಲ್ಲ ಎಂದರೆ ಸುಳ್ಳು.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**